**ಕರ್ನಾಟಕ ಸರ್ಕಾರ**
**ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**


080 – 29753051
directorfbish@gmail.com
www.esuraksha.karnataka.gov.in

ನಿರ್ದೇಶಕರ ಕಛೇರಿ,
2ನೇ ಮಹಡಿ, ಕಲ್ಯಾಣ-ಸುರಕ್ಷಾ ಭವನ,
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29


ಸಂ: ಎಲ್‌ಜಿಎಲ್-2/ಇತರೆ/ಸಿಆರ್-01/2024-25

ದಿ: 06-04-2024

## ಸುತ್ತೋಲೆ

ವಿಷಯ : ಸಾರ್ವತ್ರಿಕ ಲೋಕಸಭೆ ಚುನಾವಣೆ-2024, ಮತದಾನದ ದಿನಾಂಕದಂದು ಅರ್ಹ ಮತದಾರರಿಗೆ ವೇತನ ಸಹಿತ ರಜೆ ಘೋಷಿಸುವ ಕುರಿತು.

ಉಲ್ಲೇಖ : ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ 78/EPS/2024 ದಿ: 16/03/2024

******

ಭಾರತ ಚುನಾವಣಾ ಆಯೋಗವು ಸಾರ್ವತ್ರಿಕ ಲೋಕಸಭೆ ಚುನಾವಣೆ-2024 ರ ಮತದಾನದ ದಿನಾಂಕಗಳನ್ನು ಘೋಷಿಸಿದ್ದು, ದೇಶಾದ್ಯಂತ 7 ಹಂತಗಳಲ್ಲಿ ಚುನಾವಣೆ ನಡೆಸಲು ನಿರ್ಧರಿಸಿರುತ್ತದೆ ಹಾಗೂ ಕರ್ನಾಟಕದಲ್ಲಿ 2ನೇ ಹಂತ ದಿ:26/04/2024 ಹಾಗೂ 3ನೇ ಹಂತ ದಿ:07/05/2024 ರಂದು ಚುನಾವಣೆ ನಡೆಯಲಿದೆ. ಪ್ರಜಾ ಪ್ರಾತಿನಿಧ್ಯ ಕಾಯ್ದೆ, 1951 ರ ಕಲಂ 135(B) ರಡಿಯಲ್ಲಿ ಎಲ್ಲಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಅರ್ಹ ಮತದಾರರಿಗೆ ತಮ್ಮ ತಮ್ಮ ಮತಕ್ಷೇತ್ರಗಳಲ್ಲಿ ಮತದಾನ ನಡೆಯುವ ದಿನದಂದು ಮತ ಚಲಾಯಿಸಲು ಅನುವಾಗುವಂತೆ ವೇತನ ಸಹಿತ ರಜೆ ನೀಡಲು ಪ್ರಾವಧಾನ ಕಲ್ಪಿಸಲಾಗಿರುವ ಕುರಿತು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿದೆ. ಇದು ಎಲ್ಲಾ ಪಾಳಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಅನ್ವಯವಾಗುತ್ತದೆ. ಮುಂದುವರೆದು, ಸದರಿ ದಿನದ ಗೈರುಹಾಜರಿಗೆ ಯಾವುದೇ ವೇತನ ಕಡಿತ ಮಾಡದಂತೆ ಮತ್ತು ಸದರಿ ದಿನದಂದು ಕೆಲಸ ನಿರ್ವಹಿಸಿದ್ದಲ್ಲಿ ನೀಡಲಾಗುತ್ತಿದ್ದ ವೇತನವನ್ನೇ ಸದರಿ ರಜಾ ದಿನಕ್ಕೆ ನೀಡಲು ನಿರ್ದೇಶನವಿರುತ್ತದೆ. ಸದರಿ ರಜೆಯು ಅರ್ಹ ಮತದಾರರಾದ ದಿನಗೂಲಿ, ಗುತ್ತಿಗೆ ಕಾರ್ಮಿಕರು, ಎಲ್ಲಾ ವರ್ಗದ ಕಾರ್ಮಿಕರು ಹಾಗೂ ಅಧಿಕಾರಿಗಳಿಗೂ ಅನ್ವಯವಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ದೇಶಾದ್ಯಂತ ಸಾರ್ವತ್ರಿಕ ಲೋಕಸಭೆ ಚುನಾವಣೆ ನಡೆಯಲಿರುವ ದಿನಾಂಕಗಳಂದು ಕಾರ್ಖಾನೆಗಳ ಕಾಯ್ದೆ, 1948 ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಅರ್ಹ ಮತದಾರ ಕಾರ್ಮಿಕರಿಗೆ ತಮ್ಮ ತಮ್ಮ ಮತಕ್ಷೇತ್ರದಲ್ಲಿ ಚುನಾವಣೆ ನಡೆಯುವ ದಿನದಂದು ಕಡ್ಡಾಯವಾಗಿ ವೇತನ ಸಹಿತ ರಜೆಯನ್ನು ನೀಡಲು ಸೂಚಿಸಿದೆ ಮತ್ತು ಸದರಿ ರಜೆಗೆ ವೇತನ ಪಾವತಿಸಲು ಸೂಚಿಸಿದೆ. ತಪ್ಪಿದಲ್ಲಿ ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951 ರ ಉಲ್ಲಂಘನೆಯಾಗುತ್ತದೆ ಎಂದು ಈ ಮೂಲಕ ತಿಳಿಸಿದೆ.

Negotiable Instrument Act, 1881 ರ ಪ್ರಕಾರವು ಸಹ ಮತದಾನದ ದಿನಾಂಕಗಳಂದು ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

ಕಾರ್ಖಾನೆಯು ತುರ್ತು ಸೇವೆಯ ಉತ್ಪಾದನಾ ಕಾರ್ಯವಿಧಾನ ಹೊಂದಿದ್ದಲ್ಲಿ, ಕಾರ್ಮಿಕರ ಅನುಪಸ್ಥಿತಿಯಿಂದ ಕಾರ್ಖಾನೆಗೆ ಅಪಾಯ ಅಥವಾ ಗಣನೀಯ ನಷ್ಟ ಉಂಟಾಗುವ ಸಾಧ್ಯತೆಯಿದ್ದಲ್ಲಿ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿ ಅಂತಹ ಕೆಲಸದಲ್ಲಿ ತೊಡಗಿರುವ ಅರ್ಹ ಮತದಾರ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಕಾಶ ಮಾಡಿಕೊಡಲು ಸೂಚಿಸಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದ ಪತ್ರ ಹಾಗೂ ಚುನಾವಣಾ ವೇಳಾಪಟ್ಟಿಯ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಅದರಂತೆ ಕ್ರಮ ವಹಿಸಲು ಸೂಚಿಸಿದೆ.

ಅಡಕ : ಮೇಲಿನಂತೆ

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

**ಇವರಿಗೆ,**

ಎಲ್ಲಾ ಕಾರ್ಖಾನೆಗಳ ಆಡಳಿತವರ್ಗದವರಿಗೆ.

ಆಯುಕ್ತರು
ಕಾರ್ಮಿಕ ಆಯುಕ್ತರ ಕಛೇರಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029
ಕಛೇರಿ: 080 2975 3078
ಇಮೇಲ್ : labour.commissioner42@gmail.com

ಸಂ: ಪಿ&ಎಸ್/ಎನ್ಎಫ್ಹೆಚ್/ಸಿಆರ್–03/2023–24 ದಿನಾಂಕ:25-03–2024

## ಕಛೇರಿ ಆದೇಶ

ವಿಷಯ : **General Elections to Loksabha, 2024 and Bye election to 36-Shorapur (ST) Assembly Constituency- Grant of Phase wise Paid Holiday to employees on the day of poll**

ಉಲ್ಲೇಖ : ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರ ಪತ್ರ ಸಂಖ್ಯೆ : DPAR 09 CHULOSA 2024, Dated:22-03-2024

= = =

ಭಾರತ ಚುನಾವಣಾ ಆಯೋಗವು 2024ರ ಲೋಕಸಭಾ ಚುನಾವಣೆಯನ್ನು ದಿನಾಂಕ:16–03–2024ರಂದು ಘೋಷಿಸಿದ್ದು ಅದರಂತೆ ಕರ್ನಾಟಕ ರಾಜ್ಯದಲ್ಲಿ ಎರಡು ಹಂತದಲ್ಲಿ ಚುನಾವಣೆ ನಿಗಧಿಯಾಗಿರುತ್ತದೆ. ದಿನಾಂಕ:26–04–2024 (ಶುಕ್ರವಾರ) ರಂದು ಮೊದಲನೇಯ ಹಂತ ಹಾಗೂ ದಿನಾಂಕ:07–05–2024 (ಮಂಗಳವಾರ) ರಂದು ಎರಡನೇ ಹಂತದ ಲೋಕಸಭಾ ಚುನಾವಣೆ ನಡೆಯಲಿದ್ದು, ಯಾದಗಿರಿ ಜಿಲ್ಲೆಯ 36–ಶೋರಾಪುರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯು ಸಹ ದಿನಾಂಕ:07–05–2024 (ಮಂಗಳವಾರ) ರಂದು ನಿಗಧಿಯಾಗಿರುತ್ತದೆ.

ಸದರಿ ದಿನಾಂಕಗಳಂದು ಮತದಾನ ನಡೆಯಲಿರುವ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನೋಂದಾಯಿತರಾದ ಅರ್ಹ ಮತದಾರರಾಗಿರುವ ಎಲ್ಲಾ ಅರ್ಹ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಂಬಂಧಪಟ್ಟ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳು 1963ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾದಿನಗಳು) ಕಾಯ್ದೆಯ ಕಲಂ 3–ಎ ಪ್ರಕಾರ ಮತ ಚಲಾಯಿಸಲು ಅವಕಾಶ ಮಾಡಿ ಕೊಡಬೇಕಾಗುತ್ತದೆ. ಆದ್ದರಿಂದ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಅರ್ಹರಿರುವ ಎಲ್ಲಾ ಕಾರ್ಮಿಕ ಮತದಾರರಿಗೆ ದಿನಾಂಕ:26–04–2024 ಹಾಗೂ 07–05–2024 ರಂದು ವೇತನ ಸಹಿತ ರಜೆ ನೀಡಿ, ಎಲ್ಲಾ ಅರ್ಹ ಕಾರ್ಮಿಕರು ಸಂವಿಧಾನಾತ್ಮಕ/ಶಾಸನಾತ್ಮಕ ಹಕ್ಕಾದ ಮತವನ್ನು ಚಲಾಯಿಸಲು ಅನುವು ಮಾಡಿಕೊಡಲು ಸೂಚಿಸಿದೆ.

ಈ ವಿಷಯದಲ್ಲಿ ಅರ್ಹ ಯಾವುದೇ ಕಾರ್ಮಿಕರಿಗೆ ಸಂವಿಧಾನಾತ್ಮಕ/ಶಾಸನಾತ್ಮಕ ಹಕ್ಕಾದ ಮತವನ್ನು ಚಲಾಯಿಸಲು ರಜೆ ನೀಡದೆ ಹಾಗೂ ಮತದಾನಕ್ಕೆ ಅವಕಾಶ ಮಾಡಿಕೊಡದಿದ್ದಲ್ಲಿ ಅಂತಹ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳ ವಿರುದ್ಧ 1963ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾ ದಿನಗಳು) ಕಾಯ್ದೆಯ ಕಲಂ 3–ಎ ಹಾಗೂ 1951ರ ಪ್ರಜಾಪ್ರಾತಿನಿಧ್ಯ ಕಾಯ್ದೆಯ ಕಲಂ 135(ಬಿ) ಉಲ್ಲಂಘನೆಗಳಿಗಾಗಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.

ಕರ್ನಾಟಕ ಲೋಕಸಭಾ ಚುನಾವಣೆ–2024ರ ಮತದಾನ ದಿನಗಳಂದು ಚುನಾವಣೆ ನಡೆಯುವ ಕ್ಷೇತ್ರದ ವ್ಯಾಪ್ತಿಗೆ ಬರುವ ಕಾರ್ಮಿಕರು, ಕಾರ್ಮಿಕ ಸಂಘಗಳು/ಮಾಲೀಕರ ಸಂಘಗಳ ಪ್ರತಿನಿಧಿಗಳ ಗಮನಕ್ಕೆ ತರಲು ಸಕಲ ಕ್ರಮಗಳನ್ನು ಕೈಗೊಳ್ಳಲು ಹಾಗೂ ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಸಂಬಂಧಪಟ್ಟ ಅಧಿಕಾರಿಗಳು/ನಿರೀಕ್ಷಕರುಗಳಿಗೆ ಸೂಚಿಸಲಾಗಿದೆ.

Gopalle

**ಆಯುಕ್ತರು**
**ಕಾರ್ಮಿಕ ಇಲಾಖೆ**

**ಗೆ:**

ಆಡಳಿತವರ್ಗ, ಎಲ್ಲಾ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳು

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ :**

1) ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು
2) ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳು

ತಮ್ಮ ಅಧೀನದಲ್ಲಿ ಬರುವ ಸಂಬಂಧಿಸಿದ ಕಾರ್ಮಿಕ ಅಧಿಕಾರಿಗಳು / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರುಗಳಿಗೆ ಸೂಚಿಸುವುದು

***ಪ್ರತಿಯನ್ನು ಮಾಹಿತಿಗಾಗಿ* :**

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2) ಮುಖ್ಯ ಚುನಾವಣಾಧಿಕಾರಿಗಳು, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು
5) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
6) ಅಪರ ಕಾರ್ಮಿಕ ಆಯುಕ್ತರು (ಆಡಳಿತ / ಕೈಗಾರಿಕಾ ಬಾಂಧವ್ಯ), ಬೆಂಗಳೂರು
7) ಜಂಟಿ ಕಾರ್ಮಿಕ ಆಯುಕ್ತರು (ಕನಿಷ್ಠ ವೇತನ), ಬೆಂಗಳೂರು

Office of the Chief Electoral Officer, Karnataka
Nirvachana Nilaya, Sheshadri Road, Bangalore-560 001

No. DPAR 09 CHULOSA 2024

Dated: 22-03-2024

**To,**

The Secretary to Government,
Labour Department,
Vikasa Soudha,
Bengaluru.

Sir,

**Sub:** General Elections to Loksabha, 2024 and Bye election to 36- Shorapur (ST) Assembly Constituency – Grant of Phase Wise Paid Holiday to employees on the day of Poll.

**Ref:** Letter No.78/EPS/2024, dated: 16th March 2023 of the Election Commission of India.

**********

With reference to the above mentioned subject, please find enclosed herewith a copy of ECI's letter cited at reference, wherein, Commission has announced General Elections to Loksabha, 2024, vide Press Note No. ECI/PN/23/2024, dated: 16.03.2024, for which the date of Poll fixed on 26.04.2024 (Friday) for 2A Phase & 07-05-2024 (Tuesday) for 3rd Phase and Bye elections to 36- Shorapur Assembly Constituency, vide Press Note No. ECI/PN/24/2024, dated: 16.03.2024, for which the date of Poll is fixed on 07-05-2024 ( Tuesday).

In this regard, your kind attention is invited towards **Section 3A of the Karnataka Industrial Establishments ( National and Festival Holidays) Act, 1963**, which states that :- " Notwithstanding anything contained in Section 3, when a General Election to the House of People or to the State Legislative Assembly or an election to fill up any casual vacancy in the House of People or to the State Legislative Assembly is held under R.P. Act, 1951 ( Central Act 43 of 1951), every employee ( other than an employee in an Industrial establishment owned or controlled by the Government of India) whose name is included in the electoral roll of the constituency where such election is held, shall be allowed on the polling day, a day's paid holiday to enable him to exercise his franchise ".

As per the said section of the of the Karnataka Industrial Establishments (National and Festival Holidays) Act, 1963, I am directed to request you to instruct the concerned department/authority to take necessary action in granting the paid holiday (Phase Wise) to the said employees across the State, by

issuing suitable instructions to all concerned on the day of Poll for the said elections. This may be treated as MOST URGENT.

Yours faithfully,

22.03.21

( SANJAY B.S.,)
Nodal Officer
CEO Office, Karnataka

**Copy to :**

Commissioner, Labour Department, Bannerghatta Road, Bengaluru-560029

By Speed Post/Email


भारत निर्वाचन आयोग

# ELECTION COMMISSION OF INDIA

Tel. No. 011-23052246
Fax 011-23052001
Website: www.eci.gov.in

निर्वाचन सदन
अशोक रोड, नई दिल्ली–110001
Nirvachan Sadan
Ashoka Road, New Delhi-110001


**No.78/EPS/2024**

**Dated: 16th March, 2024**

To

1. The Secretary to the Govt. of India, M/o Personnel Public Grievances & Pensions,
   Department of Personnel and Training
   North Block, New Delhi.
2. The Chief Secretaries of
   All States and UTs
3. The Chief Electoral Officers of
   All States and UTs

CHIEF ELECTORAL OFFICER ★ BANGALORE ★ 758222 21 MAR 2024

21/3/2024

**Subject: General Election to Lok Sabha, 2024 and Bye-elections to ACs of various States – PHASE WISE PAID HOLIDAY - regarding.**

Madam/Sir,

I am directed to refer to the subject cited and to inform that the Commission has announced General Election to Lok Sabha, 2024 and Bye-elections to ACs of various States vide its Press Notes No. ECI/PN/23/2024 and No. ECI/PN/24/2024 respectively dated 16.03.2024 available on the Commission's website under URL https://elections24.eci.gov.in/docs/press-note-no-23.pdf

**2.** In this regard, your attention is invited to Section 135B of the Representation of the People Act, 1951 which provides for the grant of paid holiday to the employees on the day of poll. Section 135B of Representation of the People Act, 1951 is reproduced below:

**Section 135B: Grant of paid holiday to employees on the day of poll:**

a) Every person employed in any business, trade, industrial undertaking or any other establishment and entitled to vote at an election to the House of the People or the Legislative Assembly of a State shall, on the day of poll, be granted a holiday.

b) No deduction or abatement of the wages of any such person shall be made on account of a holiday having been granted in accordance with sub-section (1) and if such person is employed on the basis that she/he would not ordinarily receive wages for such a day, she/he shall nonetheless be paid for such day the wages she/he would have drawn had not a holiday been granted to her/him on that day.

c) If an employer contravenes the provisions of sub-section (1) or sub-section (2), then such employer shall be punishable with fine, which may extend to five hundred rupees.

d) This section shall not apply to any elector whose absence may cause danger or substantial loss in respect of the employment in which he is engaged.

3. The above provisions require that all the electors who are employee of establishments and shops including those which work on shift basis shall be granted a paid holiday on the day of poll in the Constituency where the General Elections to Lok Sabha and bye-elections are to be held. Further, there may be cases where a person is ordinarily resident of the Constituency and registered as an elector, may be serving or employed in an industrial undertaking or an establishment located outside the Constituency having General poll. It is clarified that in such a situation, even those electors including casual workers working outside the constituency concerned would be entitled to the benefit of a paid holiday extended under the Section 135B (1) of the Representation of the People Act, 1951.

4. The daily wage/casual workers are also entitled for a holiday and wages on poll day as provided in Section 135B of the R.P. Act, 1951.

5. The Commission desires that suitable instructions shall be issued to all concerned for **all phase wise election schedules as mentioned in the Commission's Notification(s) for respective State/UT** and a copy thereof be endorsed to the Commission for its information and record.

The receipt of this letter may kindly be acknowledged.

Yours faithfully

(BREJESH KUMAR)
UNDER SECRETARY

(5) "Inspector" means an Inspector appointed under sub-section (1) of section 6;

(6) "notification" means a notification published in the official Gazette;

(7) "wages" means all remuneration capable of being expressed in terms of money, which would, if the terms of employment, express or implied, were fulfilled, be payable to an employee in respect of his employment or of the work done by him in such employment, and includes,—

(i) such allowances (including dearness allowance) as the employee is for the time being entitled to;

(ii) the value of any house accommodation, or of supply of light, water, medical attendance or other amenity or of any service or of any concessional supply of foodgrains or other articles;

but does not include,—

(*a*) any bonus;

(*b*) any contribution paid or payable by the employer to any pension fund or provident fund, or for the benefit of the employee under any law for the time being in force;

(*c*) any gratuity payable on the termination of his service;

(*d*) any sum paid to an employee to defray special expenses entailed on him by the nature of his employment;

(*e*) any travelling concession.

[1][**3. Grant of National and festival Holidays.**—(1) Every employee shall be allowed in each calendar year, a holiday of one whole day on the 26th January, 15th August, 2nd October and five other holidays each of one whole day for such festivals as the employer may specify, from out of the list of festivals specified in the Schedule appended to this Act in consultation with the trade unions or in the absence of any trade union in consultation with the employees or their authorised representatives in such manner as may be prescribed:

Provided that except in the case of Industrial establishments owned or controlled by the Government of India, the number of such other holidays shall be seven including first day of May and first day of November.

(2) Whenever there is any disagreement between the employer and employees or the trade Unions concerned as to the festivals to be allowed as holidays during each calendar year the employer or the employees of the concerned Trade Union shall refer the dispute to the Inspector, having jurisdiction over the area in which the Industrial establishment is situated, for his decision and his decision shall be final.

**3A. Grant of Holidays on the polling day, for House of the People or to the State Legislative Assembly.**—Notwithstanding anything contained in section 3, when a general election to the House of the People or to the State Legislative Assembly or an election to fill up any casual vacancy in the House of the People or the State Legislative Assembly is held under the Representation of the People Act, 1951 (Central Act 43 of 1951), every employee (other than an employee in an Industrial establishment owned or controlled by the Government of India) whose name is included in the electoral roll of the constituency where such election is held, shall be allowed on the polling day, a day's paid holiday to enable him to exercise his franchise.][1]

1. Section 3 and 3A substituted by Act 28 of 1997 w.e.f. 30.9.1997